# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 10 ಪ್ರಾ.ಸಾ. : 09**

ಸಾಕ್ಷಿಯ ಹೆಸರು : ನಾಗರಾಜ ಬಾಲರಾಜ

ತಂದೆಯ ಹೆಸರು : ಬಾಲರಾಜ

ವಯಸ್ಸು : 34 ವರ್ಷ

ಕೆಲಸ : ಕೂಲಿ

ವಾಸ : ರಾಜೀವ ನಗರ, ಕದ್ರಾ, ಕಾರವಾರ

**ದಿನಾಂಕಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ದಿಃ 15-02-2014 ರಂದು ಸಂಜೆ 05-45 ರ ಸಮಯದಲ್ಲಿ ಕದ್ರಾ ಪೊಲೀಸರು ನನ್ನನ್ನು ಪಂಚನಾಮೆಗಾಗಿ ಮೃತ ವೇಲುವಿನ ಮನೆಯ ಹತ್ತಿರ ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ, ಅಲ್ಲಿ ಚಾಸಾ-29, 30 ಹಾಗೂ ಪೊಲೀಸರು ಇದ್ದರು. ಚಾಸಾ-29 ರವರು ಮನೆಯ ಒಳಗೆ ಕರೆದುಕೊಂಡು ಹೋಗಿ, ಬೆಡ್ ರೂಮ್ ನ ಬೆಡ್ ಮೇಲೆ ಇದ್ದ ಒಂದು ನೊಕಿಯಾ ಮೊಬೈಲ್ ನ್ನು ತೋರಿಸಿದರು, ಅದರಲ್ಲಿ ಎರಡು ಸಿಮ್ ಗಳು ಹಾಗೂ ಬ್ಯಾಟರಿ ಇತ್ತು. ಮನೆಯ ಗೋಡೆಯ ಸೆಲ್ಫ್ ಮೇಲೆ ಎರಡು ನೋಕಿಯಾ ಮೊಬೈಲ್ ಗಳು ಹಾಗೂ ಒಂದು ಜಿ-ಫೈವ್ ಮೊಬೈಲ್ ಇತ್ತು. ಸದರಿ ಮೂರೂ ಮೊಬೈಲ್ ಗಳಲ್ಲಿ ಬ್ಯಾಟರಿಗಳು ಇದ್ದವು ಆದರೆ ಯಾವುದಕ್ಕೂ ಸಿಮ್ ಗಳು ಇರಲಿಲ್ಲ. ನಂತರ ಚಾಸಾ-29 ರವರು ಮನೆಯ ಅಲ್ಮೆರಾವನ್ನು ತೆರೆದು, ಬಂಗಾರದ ಆಭರಣಗಳನ್ನು ಹಾಗೂ ನಗದು ಹಣ ರೂ.4,020/- ಗಳನ್ನು ತೋರಿಸಿದರು. ಪೊಲೀಸರು 4 ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡರು ಹಾಗೂ ಹಣ ಮತ್ತು ಒಡವೆಗಳನ್ನು ಚಾಸಾ-29 ರವರಿಗೆ ನೀಡಿದರು. ಅಲ್ಲಿ ಪೊಲೀಸರು 05-45 ರಿಂದ 06-45 ರ ವರೆಗೆ ಪಂಚನಾಮೆಯನ್ನು ಮಾಡಿ, ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-20(ಬಿ) ಎಂದು ಗುರುತಿಸಲಾಯಿತು. ಸದರಿ ಜಪ್ತು ಪಂಚನಾಮೆಯ ಕಾಲಕ್ಕೆ

ಜಪ್ತುಪಡಿಸಿಕೊಂಡ ಮೊಬೈಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆಮಾಲು-22 ರಿಂದ 25 ಎಂದು ಗುರುತಿಸಲಾಗಿರುತ್ತದೆ.

2. ದಿಃ 18-02-2014 ರಂದು ಪೊಲೀಸರು ನನ್ನನ್ನು ಕದ್ರಾ ಪೊಲೀಸ್ ಠಾಣೆಗೆ ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ ಠಾಣೆಯಲ್ಲಿ ಪೊಲೀಸರು, ಚಾಸಾ-21 ಮಣಿ ಹಾಗೂ ಆರೋಪಿ ಇದ್ದನು. ಅಲ್ಲಿ ಪೊಲೀಸರು ಆರೋಪಿಯನ್ನು ತೋರಿಸಿ, ಈತನೇ ವೇಲು ಹಾಗೂ ಆತನ ಮಕ್ಕಳಾದ ಅಶ್ವಿನಿ ಮತ್ತು ಸತ್ಯ ನಾರಾಯಣ ಮೂರ್ತಿಯನ್ನು ಕಡಿದು ಕೊಲೆ ಮಾಡಿರುತ್ತಾನೆ ಹಾಗೂ ಜಾನಕಿಯನ್ನು ಕಡಿದಿರುತ್ತಾನೆ ಎಂದು ಹೇಳಿರುತ್ತಾರೆ. ಅಲ್ಲಿ ಆರೋಪಿ ಪೊಲೀಸರಿಗೆ ಕೃತ್ಯಕ್ಕೆ ಬಳಸಿದ ಕತ್ತಿಯನ್ನು ಮನೆಯಲ್ಲಿಟ್ಟಿದ್ದು,ಜೊತೆಯಲ್ಲಿ ಬಂದರೆ ತೋರಿಸುವುದಾಗಿ, ಹೇಳಿರುತ್ತಾನೆ. ಅದರಂತೆ ಪೊಲೀಸರು ನಮ್ಮನ್ನು ಹಾಗೂ ಆರೋಪಿಯನ್ನು ಪೊಲೀಸ್ ಜೀಪ್ ನಲ್ಲಿ ಕದ್ರಾ ಚರ್ಚ್ ಹಿಂಬದಿಯಲ್ಲಿದ್ದ ಆರೋಪಿಯ ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಆರೋಪಿ ಜೀಪ್ ನಿಂದ ಕೆಳಗೆ ಇಳಿದು, ನಮ್ಮನ್ನು ಅವರ ಮನೆಯ ಒಳಗೆ ಕರೆದುಕೊಂಡು ಹೋಗಿ, ಮನೆಯ ಹಿಂಬದಿಯಲ್ಲಿದ್ದ ಗುಡಿಸಲಿಗೆ ಕರೆದುಕೊಂಡು ಹೋದ, ಅಲ್ಲಿ ಹಳೆಯ ಸಾಮಾನುಗಳನ್ನು ಹಾಗೂ ಕಟ್ಟಿಗೆಗಳನ್ನು ತುಂಬಲಾಗಿತ್ತು ಹಾಗೂ ಆರೋಪಿ ಅಲ್ಲಿ ಒಂದು ಕತ್ತಿಯನ್ನು ತೆಗೆದು, ತಾನು ಇದೇ ಕತ್ತಿಯನ್ನು ಕೊಲೆ ಮಾಡಲು ಬಳಸಿದ್ದು ಎಂದು ಹೇಳಿ ಪೊಲೀಸರಿಗೆ ನೀಡಿದನು. ಸದರಿ ಕತ್ತಿಗೆ ರಕ್ತ ತಾಗಿತ್ತು, ಪೊಲೀಸರು ಅದನ್ನು ಬಟ್ಟೆಯಿಂದ ಸುತ್ತಿ, ತೆಗೆದುಕೊಂಡರು. ಅದೇ ರೀತಿ ಆರೋಪಿ ಅದೇ ಗುಡಿಸಲಿನ ಹಗದ್ದ ಮೇಲೆ ಒಣ ಹಾಕಿದ್ದ ತನ್ನ ಟೀ-ಶರ್ಟ್ ಹಾಗೂ ಚಡ್ಡಿಯನ್ನು ಪೊಲೀಸರಿಗೆ ಕೊಟ್ಟು, ಕೊಲೆ ಮಾಡುವ ಸಮಯದಲ್ಲಿ ತಾನು ತೊಟ್ಟಿದ್ದ ಬಟ್ಟೆ ಎಂದು ಹೇಳಿರುತ್ತಾನೆ. ಆ ಬಟ್ಟೆಗಳಿಗೂ ಸಹ ರಕ್ತ ತಾಗಿತ್ತು. ಪೊಲೀಸರು ಅವುಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು. ಪುನಃ ಆರೋಪಿ ನಮ್ಮನ್ನು ಆತನ ಮನೆಯ ಒಳಗೆ ಕರೆದುಕೊಂಡು ಬಂದು, ಮನೆಯ ಹಾಲ್ ನಲ್ಲಿದ್ದ ಟಿ.ವಿ.ಯ ಮೇಲೆ ಇಟ್ಟ ಸ್ಯಾಮಸಂಗ್ ಮೊಬೈಲ್ ನ್ನು ಹಾಜರುಪಡಿಸಿದ್ದು, ಅದನ್ನು ಸಹ ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು. ನಂತರ ಆರೋಪಿ ತಾನು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ, ನಮ್ಮನ್ನು ಅಲ್ಲಿಂದ ರಾಜೀವನಗರದ ಕೊಡ್ಸಳ್ಳಿ ಡ್ಯಾಂ ಕಡೆಗೆ ಹೋಗುವ ರಸ್ತೆಯಲ್ಲಿ ಕರೆದುಕೊಂಡು ಹೋಗಿ, ಅಲ್ಲಿ ಜೀಪ್ ನ್ನು ನಿಲ್ಲಿಸುವಂತೆ ಹೇಳಿ, ಜೀಪ್ ನಿಂದ ಇಳಿದು, ಜಂಗಲ್ ಕಡೆಗೆ ಹೋಗುವ ರಸ್ತೆಯಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ, ಸುಮಾರು 15-20 ಅಡಿ ದೂರದಲ್ಲಿ ಸತ್ಯ ನಾರಾಯಣ

ಮೂರ್ತಿಯನ್ನು ಕೊಲೆ ಮಾಡಿದ ಸ್ಥಳವನ್ನು ತೋರಿಸಿರುತ್ತಾನೆ. ಆ ಸ್ಥಳದಲ್ಲಿ ರಕ್ತ ಹರಡಿಕೊಂಡಿತ್ತು. ಆ ಸ್ಥಳದಿಂದ 15 ಅಡಿ ದೂರದಲ್ಲಿ ಮೃತ ವೇಲುವಿನ ಕೊಲೆ ಮಾಡಿದ ಸ್ಥಳವನ್ನು ತೋರಿಸಿರುತ್ತಾನೆ, ಅಲ್ಲಿಯೂ ಸಹ ರಕ್ತ ಹರಡಿಕೊಂಡಿತ್ತು. ನಂತರ ಆರೋಪಿ ಕೊಲೆ ಮಾಡಲು ಬಳಸಿದ ಕತ್ತಿಯನ್ನು, ಕೊಲೆ ಮಾಡುವ ಮೊದಲು ಸಾಗುವಾನಿ ಮರದ ಬುಡದಲ್ಲಿ ಇಟ್ಟಿದ್ದಾಗಿ ಹೇಳಿ, ತೋರಿಸಿರುತ್ತಾನೆ.

3. ನಂತರ ಆರೋಪಿ ನಮ್ಮನ್ನು ವೇಲು ರವರ ಮನೆಗೆ ಕರೆದುಕೊಂಡು ಹೋಗಿ, ಅಶ್ವಿನಿಯನ್ನು ಇದೇ ಜಾಗದಲ್ಲಿ ಕೊಲೆ ಮಾಡಿರುತ್ತೇನೆ ಹಾಗೂ ಜಾನಕಿಯ ಕೈಯನ್ನು ಕಡಿದಿರುತ್ತೇನೆ ಎಂದು ಹೇಳಿ, ಜಾಗ ತೋರಿಸಿರುತ್ತಾನೆ. ಮನೆಯ ಹಾಲ್ ನಲ್ಲಿ ಹಾಗೂ ಬೆಡ್ ರೂಮ್ ನೆಲದ ಮೇಲೆ ರಕ್ತ ಚೆಲ್ಲಿರುತ್ತದೆ. ನಾವು ಆ ದಿನ ಪೊಲೀಸ್ ಠಾಣೆಯಿಂದ 10–00 ಗಂಟೆಗೆ ಹೊರಟ ಸಮಯದಿಂದ 11–30 ಗಂಟೆ ವರೆಗೆ ಪೊಲೀಸರು ಪಂಚನಾಮೆಯನ್ನು ಬರೆದು, ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಮೇಲೆ ಹೇಳಿದ ಎಲ್ಲಾ ಸ್ಥಳಗಳಲ್ಲಿ ಪೊಲೀಸರು ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–24 ಎಂದು, ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಒಟ್ಟು 11 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–25 ರಿಂದ ನಿಪಿ–35 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.)**

4. ಆರೋಪಿ ತಮ್ಮ ಮನೆಯ ಗುಡಿಸಲಿನಿಂದ ಎತ್ತಿ ಪೊಲೀಸರಿಗೆ ನೀಡಿದ ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು–26 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಆರೋಪಿಯು ಹಾಜರುಪಡಿಸಿದ ಟಿ–ಶರ್ಟ್ ಹಾಗೂ ಚಡ್ಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು–27 ಮತ್ತು 28 ಎಂದು ಗುರುತಿಸಲಾಯಿತು. ಆರೋಪಿ ಹಾಜರುಪಡಿಸಿದ ಮೊಬೈಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು–29 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲು–26

ರಿಂದ 28 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು–26(ಎ) ಯಿಂದ ಮುದ್ದೆ ಮಾಲು–28(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ